**ಸಾಕ್ಷಿಯನ್ನು ದಿಃ 14.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಬಿ ಸಿ ಎಂ. ವಕೀಲರಿಂದಃ**

1) ನನ್ನ ಅತ್ತೆಯ ಮನೆ ತಮ್ಮಲಿಂಗನ ಗ್ರಾಮ. ನನಗೆ ಮದುವೆ ಆಗಿ ಸುಮಾರು 27 ವರ್ಷ ಆಗಿದೆ. ನನ್ನ ತಂದೆ ನನ್ನ ಮದುವೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮದುವೆಗೆ ನನ್ನ ತಂದೆ ಸುಮಾರು 50 ಗ್ರಾಂ ಚಿನ್ನದ ಒಡವೆ ನೀಡಿದ್ದರು. ಯಾವುದೇ ವರದಕ್ಷಿಣೆ ನೀಡಿಲ್ಲ. ಮದುವೆಯನ್ನು ಅದ್ದೂರಿಯಿಂದ ಮಾಡಿದ್ದಾರೆ ಎಂದರೆ ಸರಿಯಲ್ಲ.

2) ದಾವಾ ಸ್ವತ್ತು ಒಟ್ಟು 6 ಎಕರೆ ಇರುತ್ತದೆ. ದಾವಾ ಸರ್ವೆ ನಂ. ಮತ್ತು ವಿಸ್ತೀರ್ಣವನ್ನು ಹೇಳಲಾಗುವುದಿಲ್ಲ. ದಾವಾ ಸ್ವತ್ತು ಮೊದಲು ನನ್ನ ತಂದೆಯ ಹೆಸರಿನಲ್ಲಿದ್ದು ಈಗ ನನ್ನ ತಾಯಿಯ ಹೆಸರಿನಲ್ಲಿದೆ. ಸರ್ವೆ ನಂ. 30/1 ವಿಸ್ತೀರ್ಣ 14 ಗುಂಟೆ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಮೂಲತಃ ಈ ಸ್ವತ್ತು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ.ಸಾಕ್ಷಿ ಮುಂದುವರೆದು ಆ ಸ್ವತ್ತನ್ನು ನನ್ನ ತಂದೆ ಬೇರೆಯವರಿಗೆ ಮಾರಿದ್ದು ನಂತರ ನಾನು ಖರೀದಿಸಿದ್ದೇನೆ. ಸಣ್ಣಮರಿಯಪ್ಪ ರವರ ಮನೆಯವರಿಗೆ ನನ್ನ ತಂದೆ ಮಾರಾಟ ಮಾಡಿದ್ದರು. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

3) 2017 ರಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾರೆ. 2019 - 2020 ರಲ್ಲಿ ಸರ್ವೆ ನಂ. 30/1 ವಿಸ್ತೀರ್ಣ 14 ಗುಂಟೆ ನನ್ನ ಹೆಸರಿಗೆ ಪ್ರತಿವಾದಿಯರು ಖಾತೆ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 14/3 ರ ಒಟ್ಟು ವಿಸ್ತೀರ್ಣ 8 ಗುಂಟೆ ನನ್ನ ತಮ್ಮ 2ನೇ ಪ್ರತಿವಾದಿಯ ಹೆಸರಿಗೆ ಬಂದಿತ್ತು ಎಂದರೆ ಗೊತ್ತಿಲ್ಲ. ಸದರಿ ಸ್ವತ್ತಿಗೆ ಸಂಬಂದಿಲ,ಸಿದಂತೆ 2ನೇ ಪ್ರತಿವಾದಿ ಅವರ ಹೆಂಡತಿ ಭಾರತಿ ಅವರಿಗೆ ಸರ್ವೆ ನಂ. 14/3 ರ ಸ್ವತ್ತನ್ನು ಧಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಸ್ವತ್ತನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. 2ನೇ ಪ್ರತಿವಾದಿಯ ಹೆಂಡತಿ ಭಾರತಿಯವರನ್ನು

ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸರ್ವೆ ನಂ. 30/1 ರ ಸ್ವತ್ತು ನನಗೆ ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ.

ನಾನು 2ನೇ ಪ್ರತಿವಾದಿಯೊಂದಿಗೆ ಷರೀಕಾಗಿ ಪ್ರತಿವಾದಿಯರ ವಿರುದ್ಧ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 30/1 ರ ಸ್ವತ್ತನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 14/3 ರ ಸ್ವತ್ತನ್ನು 2ನೇ ಪ್ರತಿವಾದಿಯ ಹೆಂಡತಿ ಭಾರತಿಯವರು ಬೇರೆಯವರಿಗೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ದುರುದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಈ ಮೊದಲೇ ವಿಭಾಗ ಆಗಿರುವುದರಿಂದ ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**